ಕೊಟ್ಟಷ್ಟೇ ಕೊಟ್ಟೆ!

✍️ಶ್ರೀವಲ್ಲಿ ರೈ ಮಾರ್ಟೆಲ್



ಒಂದು ಊರಿನಲ್ಲಿ ಒಬ್ಬ ತಿಂಡಿ ವ್ಯಾಪಾರಿ ಇದ್ದನು. ಅವನು ಕೆಲಸದವರಿಂದ ಸರಿಯಾಗಿ ಕೆಲಸ ಮಾಡಿಸಿಕೊಂಡು, ಅವರಿಗೆ ಹೊಟ್ಟೆಗೆ ಸರಿಯಾಗಿ ತಿನ್ನಲು ಕೊಡದೆ, ಸಂಬಳವನ್ನೂ ಸರಿಯಾಗಿ ನೀಡದೆ ಕಿರುಕುಳ ನೀಡುತ್ತಿದ್ದನು. ಕೆಲಸದವರು ನಾಲ್ಕು ದಿನ ದುಡಿದು, ಹಣವನ್ನೂ ಕೇಳದೆ ಓಡಿಹೋಗುತ್ತಿದ್ದರು.

ಹೀಗಿರುವಾಗ, ಒಬ್ಬ ಬುದ್ಧಿವಂತ ವ್ಯಕ್ತಿ ಅವನ ಬಳಿ ಕೆಲಸಕ್ಕೆ ಸೇರುತ್ತಾನೆ. ಯಜಮಾನ ಲೆಕ್ಕ ಮಾಡಿ ಕೊಟ್ಟ ತಿಂಡಿಯನ್ನು ತಲೆಯ ಮೇಲೆ ಹೊತ್ತು, ಪೇಟೆಯ ಅಂಗಡಿಗೆ ನಡೆದುಕೊಂಡು ಹೋಗಿ ತಲುಪಿಸಿ ಬರುವುದು ಅವನ ಕೆಲಸವಾಗಿತ್ತು. ಕಾಡು ದಾಟಿ ಊರಿನ ಪೇಟೆಗೆ ಹೋಗಿ, ಮತ್ತೆ ಅದೇ ದಾರಿಯಲ್ಲಿ ಹಿಂತಿರುಗಬೇಕಿತ್ತು. ಒಮ್ಮೆ ದಾರಿಯಲ್ಲಿ ಹೋಗುವಾಗ ಅವನಿಗೆ ವಿಪರೀತ ಹಸಿವಾಯಿತು. ಕೈಯಲ್ಲಿದ್ದ ಗಂಟಿನಲ್ಲಿ ಏನಾದರೂ ತಿನ್ನೋಣ ಎಂದರೆ, ಯಜಮಾನ ಲೆಕ್ಕ ಮಾಡಿ ಚೀಟಿ ಕೊಟ್ಟಿದ್ದನು. ಹುಡುಕಿದಾಗ ಅವನಿಗೆ ಒಂದು ಚಕ್ಕುಲಿಯ ಚೀಲ ಸಿಕ್ಕಿತು. ಅದು ಆರು ಸುತ್ತಿನ ದೊಡ್ಡ ಚಕ್ಕುಲಿಯಾಗಿತ್ತು.

ಅದನ್ನು ನೋಡಿದ ತಕ್ಷಣವೇ ಆ ಚಾಣಾಕ್ಷನ ತಲೆಯಲ್ಲಿ ಒಂದು ಉಪಾಯ ಹೊಳೆಯಿತು. ಎಲ್ಲ ಚಕ್ಕುಲಿಗಳಿಂದ ಒಂದೊಂದು ಸುತ್ತನ್ನು ತೆಗೆದು, ಅವುಗಳನ್ನು ಐದು ಸುತ್ತಿನ ಚಕ್ಕುಲಿಗಳನ್ನಾಗಿ ಮಾಡಿದನು. ತೆಗೆದ ಒಂದೊಂದು ಸುತ್ತನ್ನು ತಾನು ತಿಂದು ಹೊಟ್ಟೆ ತುಂಬಿಸಿಕೊಂಡು, ಅಲ್ಲೇ ಹರಿಯುತ್ತಿದ್ದ ನದಿಯ ನೀರನ್ನು ಕುಡಿದು ಪೇಟೆಗೆ ಹೊರಟನು.

ಅಂಗಡಿಗೆ ಹೋಗಿ ಲೆಕ್ಕಕ್ಕೆ ತಕ್ಕಂತೆ ಸಾಮಾನನ್ನು ಕೊಟ್ಟು, ಆ ಅಂಗಡಿಯವನಿಂದ ಚೀಟಿಯನ್ನು ಪಡೆದುಕೊಂಡು ಹಿಂತಿರುಗಿದನು.
ಅದಕ್ಕೇ ಹೇಳುವುದು, "ಬೆಟ್ಟಕ್ಕೆ ಬೆಟ್ಟವೇ ಅಡ್ಡ ಇದೆ" ಎಂದು. ನಾವೇ ಜಾಣರು ಎಂದು ಅಂದುಕೊಳ್ಳಬಾರದು, ನಮಗಿಂತಲೂ ಚಾಣಾಕ್ಷರು ಇದ್ದೇ ಇರುತ್ತಾರೆ!